# ವೈಜ್ಞಾನಿಕ ಕತೆ

ಆ ಸಂಜೆಯನ್ನು ನೆನಪಿಸಿಕೊಂಡರೆ ನನಗೆ ಈಗಲೂ ರೋಮಾಂಚನವಾಗುತ್ತದೆ. ಆ ಕಾಲದಲ್ಲಿ ನಾನು ಲಖನೌದಲ್ಲಿದ್ದೆ. ನವಾಬರು ಮಾಯವಾದರೇನಂತೆ, ನವಾಬಗಿರಿ ಇನ್ನೂ ಅಲ್ಲಿಯವರಲ್ಲಿ ಜೀವಂತವಾಗಿದೆ. ಯಾರು ಯಾರಿಗೇನೂ ಕಮ್ಮಿಯಿಲ್ಲ. ಪ್ರತಿಯೊಬ್ಬರೂ ನವಾಬರಂತೆಯೇ ವರ್ತಿಸುತ್ತಾರೆ. ಆ ಸಂಜೆ ನನ್ನ ಜೊತೆ ಸೇರಿದ ಮೂವರೂ ವೈಜ್ಞಾನಿಕ ಕಥಾಲೋಕದ ನವಾಬರೇ. ಅವರ ಹೆಸರುಗಳನ್ನು ಇದ್ದಕ್ಕಿದ್ದಂತೆ ಹೇಳಿ ಕಾನೂನಿನ ತೊಡಕಿನಲ್ಲಿ ಸಿಕ್ಕಿಹಾಕಿಕೊಳ್ಳುವುದಕ್ಕಿಂತ ಬೇರೆ ಹೆಸರುಗಳಿಂದಲೇ ಕರೆದರಾಯಿತು. ಗುಲಾಬಿಯನ್ನು ಯಾವ ಹೆಸರಿನಿಂದ ಕರೆದರೂ ಅದು ಗುಲಾಬಿಯೇ ಅಂತ ಶೇಕ್ಸ್‌ಪಿಯರ್ ಮಹಾಶಯನೇ ಹೇಳಿದ್ದಾನಲ್ಲಾ! ಹೋಗಲಿ ಬಿಡಿ ವಿಷಯವನ್ನು ಬೇರೆ ಕಡೆ ಬೆಳೆಸುವುದು ಬೇಡ, ಕಥೆಯತ್ತ ಬರೋಣ. ಇವರ ಹೆಸರುಗಳು ಹೀಗಿರಲಿ:

1. ಲಖನೌದಲ್ಲೇ ಇರೋನು ಲಖನ್
2. ದೆಹಲಿಯವ ದಿಲೀಪ
3. ಅಮೆರಿಕಾದವ ಅಮಿತ್

ಈಗ ಕಥೆ ಆರಂಭಿಸೋಣ:

ಆ ದಿನಗಳಲ್ಲಿ ನಾಲ್ವರೂ ಒಟ್ಟಿಗೆ ಒಂದುಕಡೆ ಸೇರಿ ನಾವು ಬರೆದ ಬರೆಯಲಿರುವ ಕಥೆಗಳ ಬಗ್ಗೆ ಚರ್ಚಿಸುತ್ತಿದ್ದೆವು. ಯಾವುದೇ ಕಥೆಯನ್ನು ಆರಂಭ ಮಾಡಬಹುದು, ಆದರೆ ಅದನ್ನು ನವಿರಾಗಿ ಬೆಳೆಸಿ ಒಂದು ಹಂತಕ್ಕೆ ಒಯ್ದು ಕೊನೆಗೊಳಿಸುವಲ್ಲಿ ಸಾಕಷ್ಟು ಕಥೆಗಾರರು ವಿಫಲರಾಗಿಬಿಡುತ್ತಾರೆ. ಆ ವಿಫಲತೆ ಅನುಭವಿಸುವುದು ಬೇಡ ಅಂತಲೇ ನಾವು ನಾಲ್ವರು ಆಗಾಗ್ಗೆ ಕೂಡುವುದು. ನಮ್ಮ ನಮ್ಮ ಕಥಾ ವಿಷಯ ವಿಚಾರ ಕಲ್ಪನೆಗಳನ್ನು ಚರ್ಚಿಗೊಳಪಡಿಸಿ ಸಾಕಷ್ಟು ಫಲ ಪಡೆದಿದ್ದೇವೆ. ಚರ್ಚಿಸಲಿಕ್ಕೆಂದು ಈ ಸಲವೂ ಹಲವಾರು ವಿಷಯ–ವಿಚಾರಗಳು ಸಾಲುಗಟ್ಟಿ ನಿಂತಿದ್ದವು.

ಲಖನ್ ಲಖನೌದವನೇ ಆದುದರಿಂದ ಅವನ ಬರುವಿಕೆ ಸುಲಭ, ಬಂದುಬಿಟ್ಟಿದ್ದ. ದೆಹಲಿಯ ದಿಲೀಪನೂ ಬಂದಾಗಿತ್ತು. ಸ್ಟೇಶನ್ನಿನಿಂದ ನಮ್ಮ ಮನೆವರೆಗೆ ಕರೆದುಕೊಂಡು ಬರುವ ವ್ಯವಸ್ಥೆಯನ್ನೂ ಮಾಡಿದ್ದೆ. ಮೂರನೆಯವ ಅಮಿತ್, ಅಮೆರಿಕದಿಂದ ಬರಬೇಕಾಗಿತ್ತು. ಅವನ ಪ್ರತೀಕ್ಷೆಯಲ್ಲಿಯೇ ಇದ್ದೆವು. ಅವನ ಸಲಹೆಯ ಮೇರೆಗೇ ನಾವು ದಿನಾಂಕ ಗೊತ್ತುಪಡಿಸಿದ್ದು. ಎಂದೂ ತಡ ಮಾಡಿದವನಲ್ಲ. ಈ ಸಲ ಯಾಕೆ ಏನಾಯಿತೋ ಗೊತ್ತಾಗಲಿಲ್ಲ. ಫೋನು ಕೂಡ ಹತ್ತಲೊಲ್ಲದು. 'ಏನಾಯಿತು ಈ ಆಸಿಮೋವ್‌ನ ಭಕ್ತನಿಗೆ...' ಎಂದು ದಿಲೀಪ ಗೊಣಗುಟ್ಟಿದ. ಅವನ ಗೊಣಗುವಿಕೆಯ ಕಾರಣ ನನಗೆ ಗೊತ್ತಿತ್ತು. ಅವನ ಗ್ಲಾಸಿಗೆ ಅವನ ಇಷ್ಟದ ಡ್ರಿಂಕ್ಸ್ ತುಂಬಿದೆ. ಅವನ ಮುಖ ಅರಳಿತು. ಇನ್ನೇನು ಬಂದಾಗ ಬರಲಿ ಎನ್ನುವಂತೆ ಗ್ಲಾಸನ್ನು ಬಾಯಿಗಿಟ್ಟುಕೊಂಡ. ಹೌದು, ದಿಲೀಪ್ ಹೇಳುವಂತೆ ಅಮಿತ್ ಆಸಿಮೋವ್ ಅವರ ಭಕ್ತ, ಅನುಯಾಯಿ, ಫ್ಯಾನ್. ಖಭೌತ ವಿಜ್ಞಾನದಲ್ಲಿ ಡಾಕ್ಟರೇಟ್ ಮಾಡಲಿಕ್ಕೆಂದು ಅಮೆರಿಕಕ್ಕೆ ಹೋದವ ಈ ಅಮಿತ್. ಅದಾಗಲೇ ಆಸಿಮೋವ್ ಅವರ ವೈಜ್ಞಾನಿಕ ಕಥೆಗಳನ್ನು ಓದಿ ಅವುಗಳ ಪ್ರಭಾವಕ್ಕೊಳಗಾಗಿದ್ದ. ಪ್ರತಿಯೊಂದು ಸಂದರ್ಭದಲ್ಲೂ ಆಸಿಮೋವ್ ಅವರ ಕಥೆಗಳ ಉದಾಹರಣೆ ಕೊಡುತ್ತಿದ್ದ. ಅಲ್ಲಿಯ ಅವನ ಗೆಳೆಯರು ಅವನಿಗೆ 'ಆಸಿಮೋವ್‌ನ ಮಾನಸಪುತ್ರ, ಎಂತಲೇ ಕರೆಯುತ್ತಿದ್ದರು. ಕೆಲವು ದಿನಗಳಲ್ಲಿ ಆಸಿಮೋವ್ ಅವರ ಶೈಲಿಯಲ್ಲಿಯೇ ಇವನೂ ಕಥೆಗಳನ್ನು ಬರೆಯಲು ಶುರು ಮಾಡಿದ. ಇವನ ಕಥೆಗಳನ್ನು ಓದಿದ ಯಾರಿಗೇ ಆಗಲಿ ಆಸಿಮೋವ್ ಅವರ ಶಾರೀರವೇ ಇವನ ಶರೀರದಲ್ಲಿ ತುಂಬಿಕೊಂಡಿದೆ ಅಂತನ್ನಿಸುತ್ತಿತ್ತು. ಆಸಿಮೋವ್ ಅವರಿಗೆ ತಕ್ಕ ವಾರಸುದಾರ ಸಿಕ್ಕ ಎಂದು ಇವನನ್ನು ಕೊಂಡಾಡುತ್ತಿದ್ದರು.